O.S. ನಂಬರಃ 47/2017

ಡಿ. ಡಬ್ಲ್ಯೂಃ 6

ದಿಃ 29-10-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ 2ನೇ ಪ್ರತಿವಾದಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

ನಮ್ಮ ತಂದೆಯವರು ನ್ಯಾಯಾಲಯದಲ್ಲಿ ಹಾಜರುಪಡಿಸಿದ ದಾಖಲಾತಿಗಳನ್ನು ನಾನೂ ಸಹ ಅಂಗೀಕರಿಸುತ್ತೇನೆ ಎಂದರೆ ಸರಿ.

ಪಾಟಿ ಸವಾಲುಃ 1ನೇ ಪ್ರತಿವಾದಿಯ ಪರ ವಕೀಲರಿಂದ ಇರುವುದಿಲ್ಲ.

ಪಾಟಿ ಸವಾಲುಃ ವಾದಿಯ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

2. ನೀವು ಹಾಗೂ ನಿಮ್ಮ ತಂದೆಯವರು ಇಂದಿನವರೆಗೂ ಸಹ ಒಟ್ಟು ಕುಟುಂಬದಲ್ಲಿಯೇ ವಾಸವಿರುತ್ತೀರಿ ಎಂದರೆ ಸರಿ. ನಿಮ್ಮ ಕುಟುಂಬದ ಮ್ಯಾನೇಜರ್ ಯಾರು ಎಂದರೆ ಸಾಕ್ಷಿಯು ನನ್ನ ತಂದೆಯವರು ಎಂದು ನುಡಿಯುತ್ತಾರೆ. ಪ್ರಮಾಣ ಪತ್ರವನ್ನು ಬರೆಯಲು ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ನಾನೇ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಮಾಣ ಪತ್ರವನ್ನು ಬರೆಸಬೇಕಾದರೆ ನಿಮ್ಮ ತಂದೆಯವರು ಹಾಜರುಪಡಿಸಿದ ದಾಖಲಾತಿಗಳು ನಿಮ್ಮ ತಾಬಾದಲ್ಲಿ ಇದ್ದವಾ ಎಂದರೆ

ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಹಾಜರುಪಡಿಸಿದ ದಾಖಲಾತಿಗಳನ್ನು ನೀವು ಇಂದಿನವರೆಗೂ ನೋಡಿ ಓದಿರುತ್ತೀರಾ ಎಂದರೆ ಸಾಕ್ಷಿಯು ಒಂದು ಸಲ ಓದಿರುತ್ತೇನೆ ಎಂದು ನುಡಿಯುತ್ತಾರೆ. ಯಾವಾಗ ಹಾಗೂ ಎಷ್ಟು ವರ್ಷಗಳ ಹಿಂದೆ ಓದಿರುತ್ತೀರಿ ಎಂದರೆ ಸಾಕ್ಷಿಯು ಸಾಧಾರಣ 2015 ರಲ್ಲಿ ಓದಿರಬಹುದು ಎಂದು ನುಡಿಯುತ್ತಾರೆ. ನಿಮ್ಮ ವಿರುದ್ಧ 3 ದಾವೆಗಳು ಚಾಲ್ತಿಯಲ್ಲಿ ಇರುತ್ತವೆ ಎಂದರೆ ಸರಿ. ನಿಮ್ಮ ಹೆಸರಿಗೆ 3 ಕ್ರಯಪತ್ರಗಳು ಆಗಿರುತ್ತವೆ ಎಂದರೆ ಸರಿ. ಅದು ಬೇರೆ ಬೇರೆ ಸಾಲಿನಲ್ಲಿ ಆಗಿರುತ್ತವೆ ಎಂದರೆ ಸರಿ. 2015 ಸಾಲಿನ ಮೊದಲು ಎಷ್ಟು ಕಾಗದ ಪತ್ರಗಳು ಆಗಿರುತ್ತವೆ ಹಾಗೂ 2015ಕ್ಕಿಂತ ನಂತರ ಎಷ್ಟು ಕಾಗದ ಪತ್ರಗಳು ಆಗಿರುತ್ತವೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯರು ಬಂದು ನಿಮಗೇನಾದರೂ ದಾವಾ ಆಸ್ತಿಯ ಕಬ್ಜೆಯನ್ನು ಕೊಟ್ಟಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವ ದಿನಾಂಕದಂದು ವಾದಿಯರು ದಾವಾ ಆಸ್ತಿಯ ಕಬ್ಜೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು 2015 ರಲ್ಲಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರು ಇಂತಹ ತಾರೀಖಿನಂದು ದಾವಾ ಆಸ್ತಿಯ ಕಬ್ಜಾವನ್ನು ವಹಿಸಿಕೊಟ್ಟಿರುತ್ತಾರೆ ಎಂದು ನಿಮ್ಮ ನೋಟೀಸಿನ ಉತ್ತರದಲ್ಲಾಗಲಿ ಅಥವಾ ಪ್ರತಿವಾದ ಪತ್ರದಲ್ಲಾಗಲಿ ನಮೂದು ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

3. ವಾದಿಯರ ಮತ್ತು ನಿಮ್ಮ ಮಧ್ಯ ಒಪ್ಪಂದ ಆಗಿರುತ್ತದೆ ಎಂದು ಹೇಳುವ ಕಾಗದ ಪತ್ರಗಳಲ್ಲಿ ನಿಮ್ಮ ಸಹಿ ಇದೆಯಾ ಎಂದರೆ ಇದೆ ಎಂದು ನುಡಿಯುತ್ತಾರೆ. ಯಾವ ಊರಿನಲ್ಲಿ ನೀವು ಹೇಳುವ ಒಪ್ಪಂದ ಪತ್ರಕ್ಕೆ ಸಹಿ ಹಾಕಿರುತ್ತೀರಿ ಎಂದರೆ ವಂದಿಗೆಯಲ್ಲಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ನಿಡಿ-5 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-5ಇ ಎಂದು ಗುರುತಿಸಲಾಯಿತು. ಅದನ್ನು ವಂದಿಗೆಯಲ್ಲಿ ಹಾಕಿರುತ್ತೇನೆ. ವಾದಿಯರು ಎಲ್ಲಿ ಸಹಿ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಅವರೂ ಸಹ ವಂದಿಗೆಯಲ್ಲಿ ಸಹಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಎಸ್ ಹೆಚ್ ನಾಯಕ ಇವರ ಮನೆಗೆ ಎಷ್ಟು ಬಾರಿ ಹೋಗಿರುತ್ತೀರಿ ಎಂದರೆ ಸಾಕ್ಷಿಯು ಒಂದು ಬಾರಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ನೀವು ವಾದಿಯರಿಗೆ ಹಣವನ್ನು ಕೊಟ್ಟಿರುತ್ತೀರಿ ಎಂದು ಹೇಳುವ ದಿನಾಂಕದಂದು ಹಣವನ್ನು ವಿತ್ ಡ್ರಾ ಮಾಡಿದ್ದರ ಬಗ್ಗೆ ದಾಖಲಾತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು 3 ಜನ ವಾದಿಯರನ್ನು ಪ್ರಪ್ರಥಮವಾಗಿ ಎಲ್ಲಿ ಭೇಟಿಯಾಗಿರುತ್ತೀರಿ ಎಂದರೆ ಸಾಕ್ಷಿಯು ಎಸ್ ಹೆಚ್ ನಾಯಕ ಇವರ ಮನೆಯಲ್ಲಿ ಭೇಟಿಯಾಗಿರುತ್ತೇನೆ ಎಂದು ನುಡಿಯುತ್ತಾರೆ. ಕರಾರು ಪತ್ರ ಆಗಿರುತ್ತದೆ ಎಂದು ಹೇಳುವ ದಿನದಂದು ನಿಮ್ಮ ತಂದೆಯವರು ಇದ್ದರು ಎಂದರೆ ಹೌದು ಎಂದು ನುಡಿಯುತ್ತಾರೆ. ಕರಾರು ಪತ್ರದಲ್ಲಿ ವಂದಿಗೆಯ ಎಸ್ ಹೆಚ್ ನಾಯಕ ಇವರ ಮನೆಯಲ್ಲಿ ಸಹಿ ಮಾಡಲಾಗಿದೆ ಎಂದು ನಮೂದು ಮಾಡಲಾಗಿದೆ ಎಂದರೆ ಹೌದು ಎಂದು ನುಡಿಯುತ್ತಾರೆ. ವಾದಿಯರ ಕಡೆಯಿಂದ ನೇರವಾಗಿ ಕ್ರಯಪತ್ರವನ್ನು ಮಾಡಿಕೊಳ್ಳಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು

ವಾದಿಯರಿಗೆ ತೊಂದರೆ ಇತ್ತು, ನನಗೆ ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ವಾದಿಯರಿಗೆ ಯಾವ ತೊಂದರೆ ಇತ್ತು ಎಂದರೆ ಸಾಕ್ಷಿಯು ಕಾರವಾರಕ್ಕೆ ಬರಲು ಆಗುವುದಿಲ್ಲ, ನೀವೇ ಮಾಡಿಸಿಕೊಳ್ಳಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಕರಾರು ಪತ್ರ ಆಯಿತು ಎಂದು ಹೇಳುವ ಜಮೀನಿನ ಸರ್ವೆ ನಂಬರುಗಳ ಪಹಣಿ ಪತ್ರಿಕೆಗಳನ್ನು ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಪಡೆದುಕೊಂಡಿರುವುದಿಲ್ಲ, ಅವರೇ ತಂದಿರುತ್ತಾರೆ ಎಂದು ನುಡಿಯುತ್ತಾರೆ. ಕರಾರು ಪತ್ರ ಮಾಡಿಕೊಳ್ಳುವ ಸಂದರ್ಭದಲ್ಲಿ ಪಹಣಿ ಪತ್ರಿಕೆಯನ್ನು ಪರಿಶೀಲನೆ ಮಾಡಿರುತ್ತೀರಾ ಅಥವಾ ಇಲ್ಲವಾ ಎಂದರೆ ನಾನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು, ವಾದಿಯರೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಕರಾರು ಪತ್ರ ಆಯಿತು ಎನ್ನುವ ದಿನದಂದು ಪಹಣಿ ಪತ್ರಿಕೆಯನ್ನು ಪಹಣಿ ಪತ್ರಿಕೆಯನ್ನು ಪರಿಶೀಲನೆ ಮಾಡಿ ಕರಾರು ಪತ್ರವನ್ನು ಮಾಡಿಸಿರುತ್ತೀರಾ ಅಥವಾ ಪಹಣಿ ಪತ್ರಿಕೆಯನ್ನು ಪರಿಶೀಲನೆ ಮಾಡದೇ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಮಾಡಿರುವುದಿಲ್ಲ, ಅವರೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕರಾರು ಪತ್ರದಲ್ಲಿ ನಮೂದಿಸಿದ ಸರ್ವೆ ನಂಬರುಗಳ ಪಹಣಿ ಪತ್ರಿಕೆಗಳಲ್ಲಿ ವಾದಿಯರ ಹೆಸರು ಇತ್ತಾ ಅಥವಾ ಇಲ್ಲವಾ ಎಂದು ಪರಿಶೀಲನೆ ಮಾಡಿ ದುಡ್ಡನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯ ನಾನು ಮಾಡಿರುವುದಿಲ್ಲ, ನನ್ನ ತಂದೆಯವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

4. ನೀವು ಸಹಿ ಮಾಡಿರುತ್ತೇನೆ ಎಂದು ಹೇಳುವ ಸಂದರ್ಭದಲ್ಲಾದರೂ ಪಹಣಿ ಪತ್ರಿಕೆಯನ್ನು ನೋಡಿಕೊಂಡು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಎಸ್ ಹೆಚ್ ನಾಯಕ ಇವರು ಓದಿ ಹೇಳಿದ ನಂತರ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅಂಕೋಲಾ ಹಾಗೂ ವಂದಿಗೆ ಗ್ರಾಮ ಬೇರೆ ಬೇರೆ ಎಂದರೆ ಸರಿ. ನೀವು ಸಹಿ ಮಾಡಿರುತ್ತೇನೆ ಎಂದು ಹೇಳುವ ಕಾಗದ ಪತ್ರದಲ್ಲಿ ಎಲ್ಲಿ ಸಹಿ ಮಾಡಿರುತ್ತೇನೆ ಎಂದು ನಮೂದು ಮಾಡಿರುತ್ತಾರಾ ಎಂದರೆ ಸಾಕ್ಷಿಯು ವಂದಿಗೆಯಲ್ಲಿ ಸಹಿ ಮಾಡಲಾಗಿದೆ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ಕರಾರು ಪತ್ರವನ್ನು ಮಾಡಿಸಿಕೊಂಡ ನಂತರ ಕ್ರಯ ಪತ್ರವನ್ನು ಮಾಡಿಕೊಡಿ ಎಂದು ವಾದಿಯರಿಗೆ ಏನಾದರೂ ನೋಟೀಸು ವಗೈರೆ ಕೊಟ್ಟಿರುತ್ತೀರಾ ಎಂದರೆ ನಾನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಆಗಿದೆ ಎನ್ನಲಾದ ಕ್ರಯಪತ್ರಗಳು ಅಂಕೋಲಾದಲ್ಲಿ ಆಗಿವೆಯಾ ಅಥವಾ ಕಾರವಾರದಲ್ಲಿ ಆಗಿವೆಯಾ ಎಂದರೆ ಸಾಕ್ಷಿಯು ಕಾರವಾರದಲ್ಲಿ ಎಂದು ನುಡಿಯುತ್ತಾರೆ. 3 ಕ್ರಯ ಪತ್ರಗಳನ್ನು ಬೇರೆ ಬೇರೆಯಾಗಿ ಮಾಡಿಕೊಳ್ಳಲು ಯಾವ ಕಾರಣ ಎಂದರೆ ಗೊತ್ತಿರುವುದಿಲ್ಲ. ನೀವು ಹಾಗೂ ನಿಮ್ಮತಂದೆಯವರು ಸೇರಿಕೊಂಡು ಎಲ್ಲ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ವಾದಿಯರಿಗೆ ಮೋಸ ಮಾಡಿರುತ್ತೀರಿ ಎಂದರೆ ಸರಿಯಲ್ಲ. ವಾದಿಯರ ತಂದೆಯ ಹೆಸರಿಗೆ ಆಸ್ತಿ ಇರಬೇಕಾದರೆ ಅವರ ಹೆಣ್ಣು ಮಕ್ಕಳಾದ ವಾದಿಯರ ಹೆಸರಿಗೆ ವಾರಸಾ ಮಾಡಿಸಿಕೊಡುತ್ತೇವೆ ಎಂದು ನೀವು ಮತ್ತು ನಿಮ್ಮ ತಂದೆ ಮೋಸ ಮಾಡಿ ಈ ರೀತಿ ಕರಾರು ಪತ್ರ ಮಾಡಿಸಿಕೊಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ವಾದಿಯರ ತಿಳುವಳಿಕೆಗೆ ಬಾರದಂತೆ ದಿಃ07-08-2015, ದಿಃ 12-04-2016 ಮತ್ತು

ದಿಃ07-03-2017 ರಂದು ಪ್ರಪ್ರತ್ಯೇಕವಾಗಿ ಕ್ರಯಪತ್ರಗಳನ್ನು ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ವಾದಿಯರ ತಿಳುವಳಿಕೆಗೆ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಒಂದೇ ಕರಾರು ಪತ್ರವನ್ನು ಮಾಡಿಕೊಂಡು, ಆದರೆ ಕ್ರಯಪತ್ರಗಳನ್ನು ಮಾತ್ರ 3 ಯಾಕೆ ಬೇರೆ ಬೇರೆ ಮಾಡಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ವಾದಿಯರೇ ತಡ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಕಾರಣದಿಂದ ವಾದಿಯರು ತಡ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

5. ಮೂರು ಕ್ರಯಪತ್ರಗಳನ್ನು ಮಾಡಿಕೊಳ್ಳಲು ಕಾರಣ ಏನು ಎಂದರೆ ಸಾಕ್ಷಿಯು ಬೇರೆ ಬೇರೆ ರೆಕಾರ್ಡುಗಳು ಇದ್ದಿದ್ದರಿಂದ ಆ ರೀತಿ ಮಾಡಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಹಣವನ್ನು ಒಂದೇ ಬಾರಿ ಕೊಟ್ಟಿರುತ್ತೀರಾ ಅಥವಾ ಹಂತ ಹಂತವಾಗಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಒಂದೇ ಬಾರಿ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಒಟ್ಟಿಗೆ ಹಣವನ್ನು ಬ್ಯಾಂಕಿನಿಂದ ತೆಗೆದು ಕೊಟ್ಟಿರುತ್ತೀರಾ ಅಥವಾ ಮನೆಯ ಟ್ರಜರಿಯಲ್ಲಿ ಇಟ್ಟಿರುತ್ತೀರಾ ಎಂದರೆ ಸಾಕ್ಷಿಯು ಮನೆಯ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತಿದ್ದರಿಂದ ಮನೆಯಲ್ಲಿರುವ ಹಣವನ್ನು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಯಾವಾಗಿನಿಂದ ವೈಯಕ್ತಿಕವಾಗಿ ದುಡಿಯಲು ಪ್ರಾರಂಭ ಮಾಡಿರುತ್ತೀರಿ ಎಂದರೆ ಸಾಕ್ಷಿಯು 2013 ರಿಂದ ಎಂದು ನುಡಿಯುತ್ತಾರೆ. ನಿಮಗೆ ಇಷ್ಟು ಆದಾಯ ಬಂದಿರುತ್ತದೆ ಎಂದು ಬರೆದು ಇಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು 2015 ರ ನಂತರ ಆದಾಯ ತೆರಿಗೆಯನ್ನು ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಪೂರ್ವದಲ್ಲಿ

ಆದಾಯ ತೆರಿಗೆಯನ್ನು ಕಟ್ಟಿರುತ್ತಾರಾ ಎಂದರೆ ಗೊತ್ತಿರುವುದಿಲ್ಲ. ನೀವು ದುಡಿಯಲು ಪ್ರಾರಂಭಿಸಿದ ಮೇಲೆ ಇಷ್ಟು ಆದಾಯ ಬಂತು ಹಾಗೂ ಇಷ್ಟು ಖರ್ಚು ಆಗಿರುತ್ತದೆ ಎಂದು ಬರೆದು ಇಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ನಿಮ್ಮ ತಂದೆ ಹಾಗೂ ಅವರ ಮಕ್ಕಳು ಒಟ್ಟಿಗೆ ಇರುತ್ತೀರಾ ಅಥವಾ ಬೇರೆ ಇರುತ್ತೀರಾ ಎಂದರೆ ಸಾಕ್ಷಿಯು ಬೇರೆ ಕಟೆ ವಾಸ ಮಾಡುತ್ತೇವೆ, ಆದರೆ ಊಟ ಒಂದೇ ಮನೆಯಲ್ಲಿ ಊಟ ಮಾಡುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಗೆ ಎಷ್ಟು ಜನ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿಯು 5 ಜನ ಗಂಡುಮಕ್ಕಳು 5 ಜನ ಹೆಣ್ಣುಮಕ್ಕಳು ಎಂದು ನುಡಿಯುತ್ತಾರೆ. ಅವರಲ್ಲಿ ಎಷ್ಟು ಜನ ಸರಕಾರಿ ನೌಕರಿಯಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಇಬ್ಬರು ಹೆಣ್ಣು ಮಕ್ಕಳು ಸರಕಾರಿ ನೌಕರಿಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ಗಂಡುಮಕ್ಕಳಲ್ಲಿ ಯಾರೂ ಸಹ ಸರಕಾರಿ ನೌಕರಿ ಮಾಡುವುದಿಲ್ಲ, ಖಾಸಗಿ ವ್ಯವಹಾರ ಮಾಡುತ್ತಾರೆ ಎಂದು ನುಡಿಯುತ್ತಾರೆ. ಇಬ್ಬರು ಹೆಣ್ಣು ಮಕ್ಕಳು ಎಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿಯು ಒಬ್ಬರು ಬಟ್ಕಳ ಹಾಗೂ ಇನ್ನೊಬ್ಬರು ಅಂಕೋಲಾ ನ್ಯಾಯಾಲಯದಲ್ಲಿ ಕೆಲಸ ಮಾಡುತ್ತಾರೆ ಎಂದು ನುಡಿಯುತ್ತಾರೆ. ನೀವು ಹೇಳುವ 4 ಲಕ್ಷ ಹಣವನ್ನು ವಾದಿಯರಿಗೆ ನಿಮ್ಮ ತಂದೆಯವರು ಕೊಟ್ಟಿರುತ್ತಾರಾ ಅಥವಾ ನೀವು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ನಮ್ಮ ತಂದೆಯವರಿಂದ ಪಡೆದುಕೊಂಡು ನಾನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ನಿಮ್ಮ ತಂದೆಯವರಿಂದ ಹಣ ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ದಿಃ16-01-2015 ರಂದು ಪಡೆದುಕೊಂಡಿರುತ್ತೇನೆ ಎಂದು

ನುಡಿಯುತ್ತಾರೆ. ನೀವು ಪಡೆದುಕೊಂಡ ಹಣವನ್ನು ನಿಮ್ಮ ತಂದೆಯವರಿಗೆ ಮರಳಿ ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

6. ನೀವು ಎಷ್ಟನೇ ಸಾಲಿನಿಂದ ಆದಾಯ ತೆರಿಗೆಯನ್ನು ಭರಣ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು 2015ರ ನಂತರ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರಿಗೆ ಪಡೆದುಕೊಂಡ ಕೈಗಡ ಹಣವನ್ನು ಐಟಿ ಆರ್ ನಲ್ಲಿ ಇಂದಿನವರೆಗೆ ತೋರಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಯಾವ ಉದ್ಯೋಗ ಮಾಡುತ್ತೀರಿ ಎಂದರೆ ಸಾಕ್ಷಿಯು ವ್ಯವಹಾರ ಮತ್ತು ಕೃಷಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ಕೃಷಿಯಿಂದ ಹಾಗೂ ವ್ಯವಹಾರದಿಂದ ಬರುವ ಉತ್ಪನ್ನವನ್ನು ಆದಾಯ ತೆರಿಗೆಯಲ್ಲಿ ತೋರಿಸಿರುತ್ತೀರಾ ಎಂದರೆ ಸಾಕ್ಷಿಯು ಕೃಷಿಯಿಂದ ಬಂದ ಉತ್ಪನ್ನ ತೋರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ವ್ಯವಹಾರ ಮಾಡುತ್ತೀರಿ ಎಂದರೆ ಸಾಕ್ಷಿಯು ಟ್ರಾನ್ಸಪೋರ್ಟೇಶನ್ (ಟ್ರಕ್, ಲಾರಿ, ಜೆಸಿಬಿ ) ವ್ಯವಹಾರ ಮಾಡುತ್ತೇನೆ ಎಂದು ನುಡಿಯುತ್ತಾರೆ. ಅವುಗಳನ್ನು ಮಾರಾಟ ಮಾಡುತ್ತೀರಾ ಅಥವಾ ಖರೀದಿ ಮಾಡಿ ಇಟ್ಟುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಖರೀದಿ ಮಾಡಿ ಬಾಡಿಗೆಗೆ ಕೊಡುತ್ತೇನೆ ಎಂದು ನುಡಿಯುತ್ತಾರೆ. ನೀವು ವಾದಿಯರಿಗೆ ಜಮೀನು ಖರೀದಿಗೆ ಸಂಬಂಧಪಟ್ಟು ಇಷ್ಟು ಹಣವನ್ನು ಮುಂಗಡವಾಗಿ ಕೊಟ್ಟಿರುತ್ತೀರಿ ಎಂದು ಎಲ್ಲಿಯಾದರೂ ಬರೆದಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿಯರಿಗೆ ನೀವಾಗಲಿ ಅಥವಾ ನಿಮ್ಮ ತಂದೆಯಾಗಲಿ ದಾವಾ ಜಮೀನುಗಳಿಗೆ ಕುರಿತು ಒಂದು

ರೂಪಾಯಿಯನ್ನೂ ಸಹ ಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ಐಟಿ ಆರ್ ಏನಾದರೂ ಸಲ್ಲಿಸುತ್ತಾರಾ ಎಂದರೆ ಗೊತ್ತಿರುವುದಿಲ್ಲ. ನೀವು ನಿಮ್ಮ ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಾ ಬಂದ ಮೇಲೆ ನಿಮ್ಮ ತಂದೆಯವರು ಹಣವನ್ನು ಏನಾದರೂ ಕೊಟ್ಟಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

7. ವಾದಿಯರು ನಿಮ್ಮ ಹತ್ತಿರ ದಾವಾ ಜಮೀನು ವಿಷಯವಾಗಿ ಮೊದಲ ಬಾರಿ ಮಾತನಾಡಿದ್ದು ಯಾವ ತಾರೀಖು ಎಂದರೆ ಸಾಕ್ಷಿಯು ದಿಃ16-01-2015 ರಂದು ಎಸ್ ಹೆಚ್ ಎನ್ ವಕೀಲರ ಮನೆಯಲ್ಲಿರುವ ಕಚೇರಿಯಲ್ಲಿ ಸಿಕ್ಕಿರುತ್ತಾರೆ ಎಂದು ನುಡಿಯುತ್ತಾರೆ. ನೀವು ದಾವಾ ಜಮೀನಿಗೆ ಸಂಬಂಧಪಟ್ಟು ಕ್ರಯದ ರಖಂ ಬಗ್ಗೆ ವಾದಿಯರ ಹತ್ತಿರ ಪ್ರಥಮ ಬಾರಿಗೆ ಯಾವಾಗ ಮಾತನಾಡಿರುತ್ತೀರಿ ಎಂದರೆ ಸಾಕ್ಷಿಯು ದಿಃ16-01-2015 ರಂದು 3ನೇ ವಾದಿಯು ಕ್ರಯದ ರಖಂ ನ್ನು ತರಲು ಹೇಳಿದ್ದು, ನಂತರ ಎಷ್ಟು ಖರ್ಚು ಆಗುತ್ತದೆ ಎಂದು ಹೇಳುತ್ತೇವೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ನೀವು ದಿಃ16-01-2015ರ ಪೂರ್ವದಲ್ಲಿ ಮೂರು ಜನ ವಾದಿಯರ ಹತ್ತಿರ ದಾವಾ ಆಸ್ತಿಯ ಖರೀದಿ ಬಗ್ಗೆ ಮಾತನಾಡಿರುತ್ತೀರಾ ಅಥವಾ ಇಲ್ಲವಾ ಎಂದರೆ ಸಾಕ್ಷಿಯು ನಾನು ಮಾತನಾಡಿರುವುದಿಲ್ಲ, ನಮ್ಮ ತಂದೆಯವರು ಮಾತನಾಡಿರುತ್ತಾರೆ ಎಂದು ನುಡಿಯುತ್ತಾರೆ. ನೀವು 3 ಜನ ವಾದಿಯರ ಜೊತೆಗೆ ದಿಃ16-01-2015 ರ ಮೊದಲು ಮಾತನಾಡಿರುತ್ತೀರೋ ಅಥವಾ ಇಲ್ಲವೂ ಎಂದರೆ

ನಾನು ಮಾತನಾಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹಣವನ್ನು ಕೊಟ್ಟಿರುತ್ತೀರಿ ಎಂದು ಹೇಳುವಾಗ ನಿಮ್ಮ ತಂದೆಯವರು ಇದ್ದರಾ ಅಥವಾ ಇಲ್ಲವಾ ಎಂದರೆ ಇದ್ದರು ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಆ ದಿನ ಹಾಜರು ಇದ್ದರು ಹಾಗೂ ನಾನು ನನ್ನ ತಂದೆಯವರಿಂದ ಹಣವನ್ನು ಪಡೆದುಕೊಂಡು ವಾದಿಯರಿಗೆ ಕೊಟ್ಟಿರುತ್ತೇನೆ ಎಂದು ಕಾಗದ ಪತ್ರಗಳಲ್ಲಿ ಬರೆಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರಿಗೆ ಸಾಕ್ಷಿಯಾಗಿ ಸಹಿ ಮಾಡಲು ಏನಾದರೂ ತೊಂದರೆ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಿಃ16-01-2015 ರ ಪೂರ್ವದಲ್ಲಿ 3 ಜನ ವಾದಿಯರು ಅನಕ್ಷರಸ್ಥರು ಎಂದು ನಿಮಗೆ ಗೊತ್ತಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಿನಾಂಕದ ಪೂರ್ವದಲ್ಲಿ ನಿಮ್ಮ ಹಾಗೂ ವಾದಿಯರ ನಡುವೆ ಒಳ್ಳೆಯ ಒಡನಾಟ ಇತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

8. ನಿಮ್ಮ ತಂದೆಯವರಿಂದ ಹಣವನ್ನು ಚೆಕ್ ಮುಖಾಂತರ ಪಡೆದುಕೊಂಡಿರುತ್ತೀರಾ ಅಥವಾ ನಗದು ಮುಖಾಂತರ ಪಡೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನಗದಾಗಿ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಕಾಗದ ಪತ್ರದಲ್ಲಿ ಎಲ್ಲಿಯಾದರೂ ನಾನು ನಮ್ಮ ತಂದೆಯಿಂದ ರೂ.5 ಲಕ್ಷ ಹಣವನ್ನು ಕೈಗಡ ಸಾಲವಾಗಿ ಪಡೆದುಕೊಂಡಿರುತ್ತೇನೆ ಎಂದು ಬರೆದಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಿಃ16-01-2015 ರ ಪೂರ್ವದಲ್ಲಿ ವಾದಿಯರನ್ನು ಯಾವಗಿನಿಂದ ನೋಡಿರುತ್ತೀರಿ

ಎಂದರೆ ಸಾಕ್ಷಿಯು 1 ಮತ್ತು 2ನೇ ವಾದಿಯರನ್ನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. 3ನೇ ವಾದಿಯು ಹಾಲಕ್ಕಿ ಒಕ್ಕಲ ಜನಾಂಗಕ್ಕೆ ಸೇರಿದವರು ಎಂದರೆ ಸರಿ. 3 ಜನ ವಾದಿಯರು ಅಕ್ಕತಂಗಿಯರು ಎಂದು ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯು ನಮ್ಮ ತಂದೆಯವರು ಹೇಳಿದ ನಂತರ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ದಿಃ16-01-2015 ರ ಎಷ್ಟು ದಿನಗಳ ಪೂರ್ವದಲ್ಲಿ ಹೇಳಿರುತ್ತಾರೆ ಎಂದರೆ ಸಾಕ್ಷಿಯು ಒಂದುತಿಂಗಳ ಪೂರ್ವದಲ್ಲಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಹೊನ್ನೇಬೈಲು ಗ್ರಾಮ ಹಾಗೂ ವಾದಿಯರ ವಾಸಸ್ಥಳಗಳಲ್ಲಿ ಹಾಲಕ್ಕಿ ಜನಾಂಗದವರು ಓದು ಬಲ್ಲವರು ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿ. ಅವರ ಜನಾಂಗದವರಲ್ಲಿ ಕೋಲ್ಕಾರ ಮುಖಂಡರು ಇರುತ್ತಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ದಿಃ16-01-2015 ರಂದು ವಾದಿಯರ ಜನಾಂಗಕ್ಕೆ ಸೇರಿದ ಓದಲು ಹಾಗೂ ಬರೆಯಲು ಬರುವ ವ್ಯವಹಾರಸ್ಥರನ್ನು ಸಾಕ್ಷಿದಾರರನ್ನಾಗಿ ಕರೆಯಲು ನಿಮಗೆ ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇರಲ್ಲಿಲ್ಲ, ಆದರೆ ಸಾಕ್ಷಿದಾರರನ್ನು ವಾದಿಯರೇ ಕರೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಖರೀದಿ ಬಗ್ಗೆ ದಿಃ16-01-2015ರ ಎಷ್ಟು ದಿನಗಳ ಪೂರ್ವದಲ್ಲಿ ಮಾತುಕತೆಯಾಗಿತ್ತು ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಜಮೀನನ್ನು ಖರೀದಿ ಮಾಡುವ ಸಂದರ್ಭದಲ್ಲಿ ಸದರಿ ಜಮೀನು ವಾದಿಯರಿಗೆ ಯಾವ ರೀತಿಯಾಗಿ ಬಂದಿರುತ್ತದೆ ಎಂದು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಮಾಡಿರುವುದಿಲ್ಲ, ನಮ್ಮ ತಂದೆಯವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಜಮೀನನ್ನು ಖರೀದಿ ಮಾಡಲು ನಿಮಗೆ ಯಾವಾಗ ಮನಸ್ಸು ಆಗಿರುತ್ತದೆ ಎಂದರೆ ಸಾಕ್ಷಿಯು ದಿಃ16-01-2015 ರ ಒಂದು ತಿಂಗಳ ಪೂರ್ವದಲ್ಲಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಜಮೀನನ್ನು ನಿಮ್ಮ ತಂದೆಯವರು ನಿಮ್ಮ ಹೆಸರಿಗೆ ಮಾಡಿಕೊಡಲು ಯಾವಾಗ ಮಾತುಕತೆಯಾಗಿರುತ್ತದೆ ಎಂದರೆ ಸಾಕ್ಷಿಯು ಒಂದು ತಿಂಗಳ ಪೂರ್ವದಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ದಾವಾ ಜಮೀನುಗಳನ್ನು ನಿಮ್ಮ ಹೆಸರಿಗೆ ಮಾಡಬೇಕು ಎಂಬ ಉದ್ದೇಶದಿಂದ ಪ್ರಿಪ್ಲಾನ್ ಮಾಡಿಕೊಂಡು ಮೊಕ್ತಿಯಾರ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನೀವು ಹಣ ಕೊಟ್ಟಿದ್ದೀರಿ ಎಂದು ಹೇಳುವ ದಿನ ಪಹಣಿ ಪತ್ರಿಕೆಯನ್ನು ಪರಿಶೀಲನೆ ಮಾಡಿರುತ್ತೀರಾ ಅಥವಾ ಇಲ್ಲವಾ ಎಂದರೆ ಸಾಕ್ಷಿಯು ನಮ್ಮ ತಂದೆಯವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆಗ ನಿಮಗೆ ರೆಕಾರ್ಡ ನೋಡಲು ಗೊತ್ತಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

9. ಜನವರಿ 16 ನೇ ತಾರೀಖಿನ ಪೂರ್ವದಲ್ಲಿ ದಾವಾ ಜಮೀನಿನ ಪಹಣಿ ಪತ್ರಿಕೆಗಳು ವಾದಿಯರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ, ನನ್ನ ನೋಡಿರುತ್ತಾರೆ ಎಂದು ನುಡಿಯುತ್ತಾರೆ. ಜಮೀನು ಯಾರ ಹೆಸರಿಗೆ ಇತ್ತು, ಜಮೀನನ್ನು ಯಾವ ರೀತಿ ನಿಮ್ಮ ಹೆಸರಿಗೆ ಮಾಡಬೇಕು ಎಂದು ನಿಮ್ಮ ತಂದೆಯವರೇ ಎಲ್ಲಾ ಪ್ಲಾನ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಜಮೀನಿನ ಉತಾರ ರೆಕಾರ್ಡನ್ನು ನೋಡಲು ನನಗೆ ಆಸಕ್ತಿ ಇರಲಿಲ್ಲ, ನಮ್ಮ ತಂದೆಯವರೇ ಎಲ್ಲ ಮಾಡಿರುತ್ತಾರೆ ಎಂದು

ನುಡಿಯುತ್ತಾರೆ. ದಿಃ16-01-2015 ರ ಪೂರ್ವದಲ್ಲಿ ನಿಮ್ಮ ತಂದೆ ಹಾಗೂ ವಾದಿಯರ ಸಂಬಂಧ ಯಾವ ರೀತಿ ಇತ್ತು ಎಂದರೆ ಗೊತ್ತಿರುವುದಿಲ್ಲ. ಸದರಿ ದಿನಾಂಕದ ಪೂರ್ವದಲ್ಲಿ ವಾದಿಯರಿಗೆ ನಿಮ್ಮ ಮೇಲೆ ನಂಬಿಕೆ ಇತ್ತಾ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಮ್ಮ ತಂದೆಯವರು ವಾದಿಯರಿಂದ ಎಷ್ಟು ಮೊಕ್ತಿಯಾರನಾಮೆ ಪತ್ರಗಳನ್ನು ಬರೆಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿಯರಿಗೆ ಮೋಸ ಹಾಗೂ ವಂಚನೆ ಮಾಡುವ ಉದ್ದೇಶದಿಂದ ನೀವು ಹಾಗೂ ನಿಮ್ಮ ತಂದೆಯವರು ಪ್ರಿಪ್ಲಾನ್ ಮಾಡಿಕೊಂಡು ಕಾಗದ ಪತ್ರಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

10. ಕ್ರಯಪತ್ರಗಳಲ್ಲಿ ದಿಃ16-01-2015 ರಂದು ವಾದಿಯರಿಗೆ ಹಣ ಮುಟ್ಟಿದ್ದರ ಬಗ್ಗೆ ನಮೂದು ಮಾಡಿರುತ್ತೀರಾ ಸಾಕ್ಷಿಯು ದಸ್ತಾವೇಜುವನ್ನು ವಾದಿಯರೇ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಸೇಲ್ ಡೀಡ್, ಕ್ರಯಪತ್ರ ಎಂದರೆ ಗೊತ್ತಾಗುತ್ತಾ ಅಥವಾ ಇಲ್ಲವಾ ಎಂದರೆ ಈಗ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. 3 ಕ್ರಯಪತ್ರಗಳನ್ನು ಬರೆದುಕೊಡುವಾಗ ವಾದಿಯರು ಉಪನೊಂದಣಾಧಿಕಾರಿ ಕಚೇರಿಗೆ ಬಂದಿರುವುದಿಲ್ಲ ಎಂದರೆ ಸರಿ. ನಿಮ್ಮ ತಂದೆಯವರು ಪ್ರೀಪ್ಲಾನ್ ಮಾಡಿಕೊಂಡು ಜಿಪಿಎ ಮುಖಾಂತರ ದಸ್ತಾವೇಜನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ವಾದಿಯರಿಗೆ ಮೋಸ ಹಾಗೂ ವಂಚನೆ ಮಾಡಬೇಕು ಎಂಬ ದುರುದ್ದೇಶದಿಂದ ನೀವು ಹಾಗೂ ನಿಮ್ಮತಂದೆಯವರು ಕಾಗದ ಪತ್ರಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ವಾದಿಯರಿಗೆ ವಾರಸಾ ಮಾಡಿಕೊಡುತ್ತೇನೆ ಎಂದು ನಂಬಿಸಿ

ಜೆಪಿಎ ಸೃಷ್ಟಿ ಮಾಡಿಕೊಂಡು ಎಲ್ಲ ಕಾಗದಪತ್ರಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ಗಂಗಾವಳಿ ಪೇರಿ ಮಾಡುವಂತ ಕೆಲಸಗಾರರು ಎಂದರೆ ಸರಿ. ಮಿಷನ್ ಲಾಂಚ್ ದೋಣಿಗಳು ಇದ್ದವು ಎಂದರೆ ಸರಿ. ಇಂದಿನವರೆಗೆ ನೀವು ದಾವಾ ಜಮೀನಿನ ಬಗ್ಗೆ ಇಷ್ಟು ಉತ್ಪನ್ನ ಹಾಗೂ ಖರ್ಚು ಆಗಿರುತ್ತದೆ ಎಂದು ನಮೂದು ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಬಿತ್ತನೆಗೆ ಸರಕಾರದವರು ಬೀಜಕ್ಕೆ ಸಬ್ಸಿಡಿ ಕೊಡುತ್ತಾರೆ ಎಂದು ನುಡಿಯುತ್ತಾರೆ. ದಾವಾ ಜಮೀನು ಬಗ್ಗೆ ಇಷ್ಟು ಉತ್ಪನ್ನ ಹಾಗೂ ಖರ್ಚು ಆಗಿರುತ್ತದೆ ಎಂದು ಬರೆದಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ದಾವಾ ಜಮೀನುಗಳಲ್ಲಿ ಈ ವರ್ಷ ಯಾವ ಬೆಳೆ ಬರೆದಿರುತ್ತೀರಿ ಎಂದರೆ ಭತ್ತವನ್ನು ಬೆಳೆದಿರುತ್ತೇವೆ ಎಂದು ನುಡಿಯುತ್ತಾರೆ. ಅದರ ಬಗ್ಗೆ ಲೆಕ್ಕಪತ್ರ ಇಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಇಂದಿನವರೆಗೆ ದಾವಾ ಜಮೀನು ವಾದಿಯರ ಕಬ್ಜಾ ವಹಿವಾಟಿಯಲ್ಲಿರುತ್ತವೆ ಎಂದರೆ ಸರಿಯಲ್ಲ. ನೀವು ನಿಮ್ಮ ತಂದೆಯವರು ಸೇರಿಕೊಂಡು ಬೋಗಸ್ ಕ್ರಯಪತ್ರ ಮಾಡಿಕೊಂಡು ವಾದಿಯರಿಗೆ ಮೋಸ ಮಾಡಿರುತ್ತೀರಿ ಎಂದರೆ ಸರಿಯಲ್ಲ. ವಾದಿಯರ ಯಾವುದೇ ರೀತಿಯಿಂದ ಸ್ವಖುಷಿಯಿಂದ ಕ್ರಯಪತ್ರ ಮಾಡಿಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರು ಎಸ್ ಹೆಚ್ ನಾಯಕ ವಕೀಲರ ಇವರ ಮನೆಗೆ ಬಂದಿದ್ದಾಗಲಿ ಅಥವಾ ಹಣ ಪಡೆದಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ರೀತಿಯಲ್ಲಿ ವಾದಿಯರಿಗೆ ರೂ.4 ಲಕ್ಷ ಅಥವಾ ರೂ.5 ಲಕ್ಷ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಹೆಸರಿಗೆ ರೆಕಾರ್ಡ

ದಾಖಲು  ಆಗಬೇಕಿದ್ದರೆ ತಹಶೀಲ್ದಾರ ಕಚೇರಿಯವರು ವಾದಿಯರಿಗೆ ನೋಟಿಸು ಕೊಟ್ಟಿರುತ್ತಾರೆ ಎಂದು ಸಾಕ್ಷಿಯು ಸಾಮಾನ್ಯವಾಗಿ ಕೊಡುತ್ತಾರೆ ಎಂದು ನುಡಿಯುತ್ತಾರೆ. ನೋಟೀಸುಗಳ ಮೇಲೆ ವಾದಿಯರ ಸಹಿಗಳನ್ನು ಪಡೆದಿರುವುದನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು  ನಿಮ್ಮ ಹೆಸರಿಗೆ ದಾವಾ ಜಮೀನುಗಳನ್ನು ಮಾಡಲು ಎಲ್ಲ  ಸ್ಟೇಜ್ ಮ್ಯಾನೇಜ್ಮೇಂಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

11. ಕ್ರಯಪತ್ರ ಆದ ನಂತರ ಸ್ಟ್ಯಾಂಪ್ ಡ್ಯೂಟಿ ಕಡಿಮೆಯಾಗಿದೆ ಎಂದು ನಿಮಗೆ ತಿಳಿಸಿರುತ್ತಾರಾ ಎಂದರೆ ತಂದೆಯವರು ಮೊದಲೇ ತುಂಬಿರುತ್ತಾರೆ ಎಂದು ನುಡಿಯುತ್ತಾರೆ. ನೀವೇನಾದರೂ 3 ಕ್ರಯಪತ್ರಗಳನ್ನು ಮಾಡಿಸಿಕೊಂಡಿದ್ದರ ಖರ್ಚಿನ ಬಗ್ಗೆ  ಆದಾಯ ತೆರಿಗೆಯಲ್ಲಿ ತೋರಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ನಿಮ್ಮ ತಂದೆಯವರು ಸೇರಿಕೊಂಡು  ಏನೂ ಅರಿಯದ ವಾದಿಯರಿಗೆ  ಸುಳ್ಳು ಕಾಗದ  ಪತ್ರಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.  ದಾವಾ ದಾಖಲು ಮಾಡುವ ಮೊದಲು  ನಿಮಗೆ ವಾದಿಯರು ವಕೀಲರ ಮುಖಾಂತರ ನೋಟೀಸು ಕೊಟ್ಟಿರುತ್ತಾರಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೋಟೀಸಿಗೆ ಉತ್ತರವನ್ನು ಏನಾದರೂ ಕೊಟ್ಟಿರುತ್ತೀರಾ ಎಂದರೆ ನನಗೆ ಗೊತ್ತಿರುವುದಿಲ್ಲ.

12. ದಿಃ07-08-2015 ರಂದು ಆದ ಕ್ರಯಪತ್ರ ಬೋಗಸ್ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಅದೇ ರೀತಿ ದಿಃ12-04-2016 ರಂದು ಆದ ಕ್ರಯಪತ್ರ ಬೋಗಸ್ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ದಿಃ07-03-2017 ರಂದು ಆದ ಕ್ರಯಪತ್ರ ಬೋಗಸ್ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.